KASM620026852025

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳು ಸಾಗರ.

**: ಉಪಸ್ಥಿತರು :**

**ಶ್ರೀ ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ.,**

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಧಿಕಾರಿಗಳು – ಸಾಗರ.

ದಿನಾಂಕಃ 19 ನೇ ಡಿಸೆಂಬರ್ 2025

**ಅಸಲು ದಾವಾ ಸಂಖ್ಯೆ 252/2025**

**ವಾದಿ** : ಕತ್ಲೆ ಮಾರ್ಯಾಪ್ಪ ತಂದೆಃ ತಿಮ್ಮಪ್ಪ,
ವಯಸ್ಸು ಸುಮಾರು 70 ವರ್ಷ,
ವಾಸಃ ಶಿರೂರು–ಆಲಳ್ಳಿ ಗ್ರಾಮ ಮರತ್ತೂರು ಅಂಚೆ,
ತಾಳಗುಪ್ಪ ಹೋಬಳಿ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**ವಿರುದ್ಧ**

**ಪ್ರತಿವಾದಿ** : ಮಂಜಪ್ಪ ಯಾನೆ ಮಂಜುನಾಥ
ತಂದೆಃ ಶಿವೇರ ದೊಡ್ಡ ಕನ್ನಪ್ಪ,
ವಯಸ್ಸು ಸುಮಾರು 52 ವರ್ಷ,
ವಾಸಃ ಶಿರೂರು–ಆಲಳ್ಳಿ ಗ್ರಾಮ ಮರತ್ತೂರು ಅಂಚೆ,
ತಾಳಗುಪ್ಪ ಹೋಬಳಿ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**ಮಧ್ಯಂತರ ಅರ್ಜಿ 1ರ ಪಕ್ಷಗಾರರು**

**ಅರ್ಜಿದಾರರು** : ಕತ್ಲೆ ಮಾರ್ಯಾಪ್ಪ ತಂದೆಃ ತಿಮ್ಮಪ್ಪ,
*(ಪರವಾಗಿ ಶ್ರೀ ಆರ್.ಕೆ,-.ವಕೀಲರು)*

ವಿರುದ್ಧ

**ಎದುರುದಾರರುಃ** : ಮಂಜಪ್ಪ ಯಾನೆ ಮಂಜುನಾಥ
*(ಪರವಾಗಿ ಶ್ರೀ ಹೆಚ್.ಎನ್.ಡಿ., ವಕೀಲರು).*

| | |
|---|---|
| Provision Under which the application is filed | Order 39 Rule 1 and 2 and R/w Sec.151 of CPC |
| Relief sought for | Temporary injunction order against the defendant from interfering with the peaceful possession and enjoyment of the suit schedule property of the plaintiff till disposal of the suit. |
| The date on which the application is filed. | 15-11-2025 |
| Number of the application. | IA No.1 |
| The date on which the objection is filed by defendant / opponent. | 15-12-2025 |
| The date on which the orders were | 19-12-2025 |

| | |
|---|---|
| passed on the said application. | |

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ 151 ರ ಅಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ**

1. ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತಿನ ಕುರಿತು ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಸದರಿ ದಾವೆಯೊಂದಿಗೆ ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ1 ನ್ನು ಸಲ್ಲಿಸಿ, ಸದರಿ ಅರ್ಜಿಯಲ್ಲಿ ಈ ದಾವೆಯು ಅಂತಿಮವಾಗಿ ನಿರ್ಣಯವಾಗುವವರೆಗೆ ದಾವಾ ಸ್ವತ್ತಿನಲ್ಲಿನ ವಾದಿಯ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು ಯಾವುದೇ ರೀತಿ ಅಡ್ಡಿ ಆತಂಕಪಡಿಸದಂತೆ ತಾತ್ಕಾಲಿಕವಾಗಿ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡುವಂತೆ ಕೋರಿರುತ್ತಾರೆ.

2. ಸಾಗರ ತಾಲ್ಲೂಕು, ತಾಳಗುಪ್ಪ ಹೋಬಳಿ, ಶಿರೂರು ಗ್ರಾಮದ ಸರ್ವೇ ನಂ.110 ರಲ್ಲಿ 1-00 ಅಡಿಕೆ, ತೆಂಗು ಮತ್ತಿ ಇನ್ನಿತರೆ ಬೆಳೆ ಇರುವ ಜಮೀನು ಇದಕ್ಕೆ ಚೆಕ್ಕುಬಂಧಿಃ

ಪೂರ್ವಕ್ಕೆ : ಸ.ನಂ.91
ಪಶ್ಚಿಮಕ್ಕೆ : ದಾವಾ ಸ್ವತ್ತಿನ ಉಳಿದ ಜಾಗ
ಉತ್ತರಕ್ಕೆ : ಈಶ್ವರಪ್ಪ ಇವರ ಸ್ವತ್ತು
ದಕ್ಷಿಣಕ್ಕೆ : ಭೀರಪ್ಪ ಇವರ ಸ್ವತ್ತು

ಈ ಮೇಲ್ಕಂಡ ಸ್ವತ್ತು ಈ ದಾವೆಯ ವಸ್ತು ವಿಷಯವಾಗಿದ್ದು, ಇನ್ನು ಮುಂದೆ ದಾವಾ ಸ್ವತ್ತು ಎಂದು ಸಂಭೋಧಿಸಲಾಗುವುದು.

3. ವಾದಿಯು ತನ್ನ ಮಧ್ಯಂತರ ಅರ್ಜಿ ಸಂಖ್ಯೆ1 ರೊಂದಿಗೆ ಹಾಜರುಪಡಿಸಿರುವ ಪ್ರಮಾಣ ಪತ್ರವನ್ನು ಪ್ರಮಾಣಪೂರ್ವಕವಾಗಿ ಹೇಳುವುದೇನೆಂದರೆ, ತಾನು

ಲಾಗಾಯ್ತಿನಿಂದಲೂ ಸಾಗುವಳಿ ಸ್ವಾಧೀನಾನುಭವ ಹೊಂದಿದ್ದು, ನಂತರ ನಿಯಾಮಾನುಸಾರ ಅಕ್ರಮ ಸಕ್ರಮ ಬಗರ್ ಹುಕುಂ ಸಾಗುವಳಿ ಮಂಜೂರಾತಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದರ ಮೇರೆಗೆ, ಸಾಗರ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಮಿತಿ ಹಾಗೂ ಕಂದಾಯ ಅಧಿಕಾರಿಗಳು ದಾವಾ ಸ್ವತ್ತಿನಲ್ಲಿನ ವಾದಿಯ ಸ್ವಾಧೀನಾನುಭವವನ್ನು ಪರಿಶೀಲಿಸಿ, ಈ ಕುರಿತು ನಕ್ಷೆ ತಯಾರಿಸಿ, ಸದರಿ ದಾವಾ ಸ್ವತ್ತನ್ನು ದಿನಾಂಕಃ 18-08-1994 ರಂದು ಮಂಜೂರಾತಿ ಆದೇಶ ಸಂಖ್ಯೆ ಇ ಎನ್ ಸಿ (ಎಸ್) ಟಿ ಜಿ 112/1994-95 ರಂತೆ ಮಂಜೂರು ಮಾಡಿರುತ್ತಾರೆ. ಈ ಕುರಿತು ವಾದಿಗೆ ಸಾಗುವಳಿ ಚೀಟಿಯನ್ನು ನೀಡಿದ್ದು, ಸಾಗುವಳಿ ಚೀಟಿಯಲ್ಲಿ ಕಾಣಿಸಿದಂತೆ, ವಾದಿಯು ಸರ್ಕಾರಕ್ಕೆ ನಿಯಾಮಾನುಸಾರ ಕಟ್ಟಬೇಕಾದ ಚೀಟಿ ದಂಡ ನೆಲ ಕಿಮ್ಮತ್ತು ಕಂದಾಯ ವಗೈರೆಗಳನ್ನು ಪಾವತಿಮಾಡಿರುತ್ತಾರೆ. ಸದರಿ ದಾಖಲೆಗಳ ಅನುಸಾರ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಪಹಣಿ ಮಾಡಲು ವಾದಿಯು ಅರ್ಜಿಯನ್ನು ನೀಡಿರುತ್ತಾರೆ. ಸರ್ಕಾರದ ಕಂದಾಯ ಇಲಾಖೆಯು ಜಮೀನಿನ ಎಲ್ಲಾ ಮೂಲ ದಾಖಲೆಗಳನ್ನು ಡಿಜಿಟಲೀಕರಣದ ಕಾರ್ಯ ಪ್ರಗತಿಯಲ್ಲಿರುವುದಂರಿದ, ಖಾತೆ ಪಹಣಿ ಕಾರ್ಯ ಪ್ರಗತಿಯಲ್ಲಿರುತ್ತದೆ. ದಾವಾ ಸ್ವತ್ತಿನಲ್ಲಿ ವಾದಿಯು ಅಡಿಕೆ ಬಾಳೆ ಹಾಗೂ ತೆಂಗು ಶುಂಠಿ ಮತ್ತು ಇನ್ನಿತರೇ ಬೆಳೆಗಳನ್ನು ಬೆಳೆಯುತ್ತಾ ತಮ್ಮ ಹಕ್ಕುದಾರಿ ಸ್ವಾಧೀನಾನಭವ ಹೊಂದಿರುತ್ತಾರೆ. ವಾದಿಗೆ ಸುಮಾರು 70 ವಯಸ್ಸಾಗಿದ್ದು, ತಮ್ಮ ವಯೋಸಹಜ ಅಸಹಾಯಕತೆಯಿಂದ ಬಳಲುತ್ತಿದ್ದು, ವಾದಿಯ ಇಬ್ಬರು ಹೆಣ್ಣು ಮಕ್ಕಳು ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ.

4. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಾಗಲೀ ಹಾಗೂ ಇನ್ನಿತರೆ ಯಾವುದೇ ವ್ಯಕ್ತಿಗಳಿಗಾಗಲೀ ಹಕ್ಕು ಹಿತಾಸಕ್ತಿ ಇರುವುದಿಲ್ಲ. ವಾದಿಯ ವಯೋಸಹಜ ಅಸಹಾಯಕತೆಯ ದುರ್ಲಾಭವನ್ನು ಪಡೆಯಲು ಸಂಚು ರೂಪಿಸಿ, ಪ್ರತಿವಾದಿಯು ಏನಾದರೂ

ಮಾಡಿ, ದಾವಾ ಸ್ವತ್ತನ್ನು ಕಬಳಿಸಬೇಕೆಂದು ವಾದಿಯ ಸ್ವಾಧೀನಾನುಭವದ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನ ಬೇಲಿಯನ್ನು ಅಕ್ರಮವಾಗಿ ಕಿತ್ತು ದಿನಾಂಕ 10-11-2025 ರಂದು ಪ್ರಯತ್ನ ಪಟ್ಟಾಗ, ವಾದಿಯು ತುಂಬಾ ಪ್ರಯಾಸದಿಂದ ಸದರಿ ದುಷ್ಕೃತ್ಯವನ್ನು ತಡೆದಿರುತ್ತಾರೆ. ವಾದಿಯ ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿರುವುದರಿಂದ, ನಿನಗೇಕೆ ಆಸ್ತಿ ಬೇಕು ಎಂದು ನಾನೇ ಸದರಿ ಆಸ್ತಿಯ ಬೇಲಿ ಕಿತ್ತು ಸ್ವಾಧೀನ ಪಡೆಯುತ್ತೇನೆ ಎಂದು ಪ್ರತಿವಾದಿಯು ಹೇಳುತ್ತಾ, ದುಂಡಾವರ್ತನೆಯಿಂದ ಬೆದರಿಕೆ ಹಾಕಿ ಹೋಗಿದ್ದು, ನಂತರ ವಾದಿಯು ತನ್ನ 2 ನೇ ಮಗಳಿಗೆ ಸದರಿ ವಿಷಯನ್ನು ತಿಳಿಸಿ, ಅದೇ ದಿನ ಸಾಗರ ಗ್ರಾಮಾಂತರ ಪೋಲಿಸ್ ಠಾಣೆಗೆ ಪ್ರತಿವಾದಿಯ ವಿರುದ್ಧ ದೂರು ನೀಡಿದಾಗ, ಸದರಿ ಪೋಲಿಸ್ ರವರು ಇದು ಸಿವಿಲ್ ಸ್ವರೂಪದ ವ್ಯಾಜ್ಯವಾಗಿರುವುದರಿಂದ, ಸಂಬಂಧಪಟ್ಟ ನ್ಯಾಯಾಲಯದಿಂದ ಆದೇಶ ತಂದಲ್ಲಿ ಮಾತ್ರ ಸೂಕ್ತ ರಕ್ಷಣೆ ನೀಡುವುದಾಗಿ ತಿಳಿಸಿರುತ್ತಾರೆ. ಪ್ರತಿವಾದಿಯು ಹೆಚ್ಚು ಪ್ರಭಾವಶಾಲಿ ವ್ಯಕ್ತಿಯಾಗಿರುವುದರಿಂದ, ವಾದಿಯ ವಯೋಸಹಕ ಅಸಮರ್ಥತೆಯನ್ನು ದುರುಪಯೋಗಪಡಿಸಿಕೊಂಡು ನ್ಯಾಯಾಲಯದ ಸಹಾಯವಿಲ್ಲದೇ ವಾದಿಯು ತನ್ನ ಆಸ್ತಿಯನ್ನು ಉಳಿಸಿಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ, ತನ್ನ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ಪ್ರತಿವಾದಿಯ ವಿರುದ್ಧ ತಾತ್ಕಲಿಕ ಪ್ರತಿಬಂದಕಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ.

5. ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾದ ನಂತರ, ಪ್ರತಿವಾದಿಯು ತನ್ನ ವಕೀಲರ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಾಗಿ, ತನ್ನ ವಿವರವಾದ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಅಲ್ಲದೇ ಮಧ್ಯಂತರ ಅರ್ಜಿ ಸಂಖ್ಯೆ.1 ಕ್ಕೆ ತನ್ನ ಪ್ರತ್ಯೇಕ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರು ಮತ್ತು ಪ್ರತಿವಾದ ಪತ್ರದಲ್ಲಿ ವಾದಿಯು ವಾದಪತ್ರದಲ್ಲಿ ಹೇಳಿದ ಸಂಗತಿಗಳನ್ನು

ನಿರ್ದಿಷ್ಟವಾಗಿ ಅಲ್ಲಗೆಳೆದಿರುತ್ತಾರೆ. ಮುಂದುವರೆದು, ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುವುದಿಲ್ಲ. ಸದರಿ ಸ್ವತ್ತಿಗೆ ಕಂದಾಯವನ್ನು ಸಹ ಪಾವತಿ ಮಾಡಿರುವುದಿಲ್ಲ. ಈ ವಾದಿಯು ಕಾನೂನಿನ ತತ್ವಗಳ ವಿರುದ್ಧವಾಗಿ ತನ್ನ ವಾದಪತ್ರವನ್ನು ಸಲ್ಲಿಸಿರುತ್ತಾರೆ. ಅಲ್ಲದೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಈ ಪ್ರತಿವಾದಿಯು ಇದ್ದು, ವಾದಿಯ ಪರವಾಗಿ ಮೇಲ್ನೋಟದ ದಾವೆ ಹಾಗೂ ಅನುಕೂಲತೆಯ ಒಲವು ಇರುವುದಿಲ್ಲ. ನ್ಯಾಯಾಲಯದ ಆದೇಶ ಪಡೆದು ಪ್ರತಿವಾದಿಯನ್ನು ದಾವಾ ಸ್ವತಿನಿಂದ ಹೊರಹಾಕಬೇಕು ಎನ್ನುವ ಉದ್ದೇಶವನ್ನು ವಾದಿಯು ಹೊಂದಿರುತ್ತಾರೆ. ಸದರಿ ಪ್ರತಿವಾದಿಯ ಪರವಾಗಿ ಅನುಕೂಲತೆಯ ಒಲವು ಇರುವುದರಿಂದ ಹಾಗೂ ಒಂದು ವೇಳೆ ನ್ಯಾಯಾಲಯವು ವಾದಿಯ ಪರವಾಗಿ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಿದರೆ, ಪ್ರತಿವಾದಿಯನ್ನು ವಾದಿಯು ದಾವಾ ಸ್ವತ್ತಿನಿಂದ ಹೋರಹಾಕುತ್ತಾರೆ. ಇದರಿಂದ ಪ್ರತಿವಾದಿಗೆ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುತ್ತದೆ. ಶಿರೂರು ಆಲಳ್ಳಿ ಸರ್ವೆ ನಂ,110 ರಲ್ಲಿ ವಾದಿಯ ತಂದೆಗೆ ಮಂಜೂರಾಗಿರುವ ಅಶ್ರಯ ನಿವೇಶನ ಇರುತ್ತದೆ. ಸದರಿ ವಾದಿಯು ಕೋರಿರುವ ಪರಿಹಾರವು ಕರ್ನಾಟಕ ಭೂ ಕಂದಾಯ ಅಧಿನಿಯಮದ ಮತ್ತು ಮಾನ್ಯ ಸಂವಿಧಾನಿಕ ನ್ಯಾಯಾಲಯಗಳ ಹಲವಾರು ತೀರ್ಪುಗಳಲ್ಲಿನ ತತ್ವಗಳಿಗೆ ವ್ಯತಿರಿಕ್ತವಾಗಿದ್ದು, ಸದರಿ ವಾದಿಯು ದಾವಾ ಸ್ವತ್ತಿನ ಯಾವುದೇ ಭಾಗದಲ್ಲಿ ಸ್ವಾಧೀನ ಇರುವುದಿಲ್ಲ. ಆದ್ದರಿಂದ, ವಾದಿಯು ಯಾವುದೇ ಪರಿಹಾರ ಪಡೆಯಲು ಅರ್ಹನಾಗಿರುವುದಿಲ್ಲ. ಆದಕಾರಣ, ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ –1 ನ್ನು ವೆಚ್ಚಗಳ ಸಹಿತ ವಜಾಗೊಳಿಸಬೇಕೆಂದು ಪ್ರತಿವಾದಿಯು ಕೋರಿರುತ್ತಾರೆ.

6. ಉಭಯ ಪಕ್ಷಗಾರರ ವಕೀಲರು ಮಂಡಿಸಿರುವ ವಾದವನ್ನು ಆಲಿಸಿದೆ, ಮತ್ತು ಪಕ್ಷಗಾರರು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ದಾವೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

7. **ಈ ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.**

ಅಂಶ –1 ವಾದಿಯು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎಂದು ಸಾಭೀತುಪಡಿಸುವರೇ ?

ಅಂಶ –2 ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ?

ಅಂಶ –3 ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸದಿದ್ದರೆ, ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆಯೇ?

ಅಂಶ –4 ಯಾವ ಆದೇಶ?

8. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶಃ 1** **ನಕಾರಾತ್ಮಕವಾಗಿ,**

**ಅಂಶಃ 2** **ನಕಾರಾತ್ಮಕವಾಗಿ,**

**ಅಂಶಃ 3** **ನಕಾರಾತ್ಮಕವಾಗಿ,**

**ಅಂಶಃ 4** ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆಃ–

## :ಕಾರಣಗಳು:

9. **ಅಂಶಃ 1 ರಿಂದ 3** ಮೇಲಿನ ಅಂಶ–1 ರಿಂದ 3 ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸಲು, ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ವಾದಿಯು ತನ್ನ ಪ್ರಮಾಣಪತ್ರದಲ್ಲಿ ತನಗೆ ದಾವಾ ಸ್ವತ್ತು ದಿನಾಂಕ 18-08-1994 ರಂದು ಬಾರ್ ಹುಕುಂ ಸಾಗುವಳಿ ಮೂಲಕ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದ್ದು, ಆ ಮೂಲಕ ತಾನು ದಾವಾ ಸ್ವತ್ತಿನ ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಅಲ್ಲದೇ ಸದರಿ ಸ್ವತ್ತಿನ ಖಾತೆ ಪಹಣಿ ಬದಲಾವಣೆಗೆ ಅರ್ಜಿಯನ್ನು ನೀಡಿದ್ದು, ಸದರಿ ಅರ್ಜಿಯು ಇತ್ಯರ್ಥಕ್ಕೆ ಬಾಕಿ ಇರುತ್ತದೆ. ದಾವಾ ಸ್ವತ್ತಿನಲ್ಲಿ ವಾದಿಯು ಅಡಿಕೆ ಬಾಳೆ ತೆಂಗು ಹಾಗೂ ಶುಂಠಿಯನ್ನು ಬೆಳೆಯುತ್ತಾ ಸ್ವಾಧೀನಾನುಭವದಲ್ಲಿದ್ದು, ಪ್ರತಿವಾದಿಯರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲದೇ ಇದ್ದರೂ ಸಹ, ದಾವಾ ಸ್ವತ್ತನ್ನು ಹೇಗಾದರೂ ಮಾಡಿ ಕಬಳಿಸಬೇಕೆನ್ನುವ ದುರುದ್ದೇಶದಿಂದ ವಾದಿಯ ಸ್ವಾಧೀನಾನಭವಕ್ಕೆ ತೊಂದರೆ ನೀಡುತ್ತಾ ಸದರಿ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನ ಬೇಲಿಯನ್ನು ಕಿತ್ತು ಅಕ್ರಮವಾಗಿ ಪ್ರವೇಶ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ, ನ್ಯಾಯಾಲಯದ ಸೂಕ್ತ ರಕ್ಷಣೆ ಇಲ್ಲದೇ ಹೋದಲ್ಲಿ, ತಾನು ದಾವಾ ಸ್ವತ್ತನ್ನು ಉಳಿಸಿಕೊಳ್ಳುವುದು ಕಷ್ಟಸಾಧ್ಯವಾಗಿರುವುದರಿಂದ, ತನ್ನ ಪರವಾಗಿ ಮೇಲ್ನೋಟದ ದಾವೆ ಹಾಗೂ ಅನುಕೂಲತೆಯ ಒಲವು ಇದ್ದು, ಪ್ರತಿವಾದಿಯ ಅಕ್ರಮ ಕೃತ್ಯವನ್ನು ಪ್ರತಿಬಂಧಿಸದೇ ಹೋದಲ್ಲಿ, ತನಗೆ ತುಂಬಲಾರದ ಹಾನಿ ಮತುೆತು ನಷ್ಟ ಉಂಟಾಗುತ್ತದೆ. ಆದ್ದರಿಂದ, ತನ್ನ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಬೇಕಲು ಅಗತ್ಯವಿರುವ ಎಲ್ಲಾ ಅಂಶಗಳನ್ನು ತಾನು ಸಾಭೀತು ಪಡಿಸಿದ್ದೇನೆ ಎಂಬುದಾಗಿ ಸಾಧನೆ ಮಾಡಿರುತ್ತಾರೆ.

11. ಪ್ರತಿವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ, ಈ ವಾದಿಯು ದಾವಾ ಸ್ವತ್ತಿನಲ್ಲಿ ಯಾವುದೇ ಭಾಗದಲ್ಲಿ ಸ್ವಾಧೀನ ಇರುವುದಿಲ್ಲ. ಅಲ್ಲದೇ ದಾವಾ ಸ್ವತ್ತಿನ ವಾದಿಯ ಸ್ವಾಧೀನವನ್ನು ತೋರಿಸುವ ಯಾವುದೇ ದಾಖಲೆಗಳನ್ನು ವಾದಿಯು ಹಾಜರುಪಡಿಸಿರುವುದಿಲ್ಲ. ನೈಸರ್ಗಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿ ವಾದಿಯು ತನ್ನ ವಾದಪತ್ರದಲ್ಲಿ ಪರಿಹಾರವನ್ನು ಕೋರಿದ್ದು, ನ್ಯಾಯಾಲಯದ

ಆದೇಶವನ್ನು ಪಡೆದು, ಆ ಮೂಲಕ ಪ್ರತಿವಾದಿಯನ್ನು ದಾವಾ ಸ್ವತ್ತಿನಿಂದ ಹೊರ ಹಾಕಬೇಕೆನ್ನುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದಕಾರಣ, ವಾದಿಯ ಪರವಾಗಿ ಮೇಲ್ನೋಟದ ದಾವೆ ಮತ್ತು ಅನುಕೂಲತೆಯ ಒಲವು ಇರುವುದಿಲ್ಲ. ಒಂದು ವೇಳೆ ತನ್ನನ್ನು ದಾವಾ ಸ್ವತ್ತಿನಿಂದ ಹೊರಹಾಕಿದರೆ, ತನಗೆ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುತ್ತದೆ. ಆದ್ದರಿಂದ, ಸದರಿ ವಾದಿಯ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ವೆಚ್ಚಗಳ ಸಹಿತ ತಿರಸ್ಕರಿಸಬೇಕೆಂದು ಸಾಧನೆ ಮಾಡಿರುತ್ತಾರೆ.

12. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಅಡಿಯನ್ನು ವಿಲೆ ಮಾಡುವಾಗ, ನ್ಯಾಯಾಲಯಕ್ಕೆ ಸದರಿ ಅರ್ಜಿಯನ್ನು ಸಲ್ಲಿಸಿದಂತಹ ಪಕ್ಷಗಾರನು ತನ್ನ ಪರವಾಗಿ ಮೇಲ್ನೋಟದ ದಾವೆ ಇದೆ ಎನ್ನುವುದನ್ನು ಹಾಗೂ ಅನುಕೂಲತೆಯ ಒಲವು ತನ್ನ ಪರ ಇದೆ ಮತ್ತು ಒಂದುವೇಳೆ ಅರ್ಜಿಯಲ್ಲಿ ಕೋರಿದಂತೆ ಪ್ರತಿಬಂಧಕಾಜ್ಞೆಯನ್ನು ನೀಡದೇ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಗಿಂತ ಹೆಚ್ಚು ನಷ್ಟ ಮತ್ತು ಹಾನಿ ಉಂಟಾಗುತ್ತದೆ ಎಂಬುದನ್ನು ಸದರಿ ಅರ್ಜಿಯನ್ನು ಸಲ್ಲಿಸಿದಂತಹ ವ್ಯಕ್ತಿಯು ಮೇಲ್ನೋಟಕ್ಕೆ ಸಾಭೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿದ್ದಾನೆ. ಮೇಲ್ನೋಟದ ದಾವೆ ಎಂದರೆ, ವಾದಿಯು ತನಗೆ ಒಂದು ವಸ್ತುವಿಷಯದ ಬಗ್ಗೆ ತನಗೆ ಇದೆ ಎಂದು ಹೇಳಲಾದ ಹಕ್ಕಿನ ಬಗ್ಗೆ ವಿಚಾರಣೆಯಾಗಬಹುದಾದ ಪ್ರಕರಣ. ಅಂದರೆ, ಮೇಲ್ನೋಟಕ್ಕೆ ದಾವೆಯನ್ನು ವಿಚಾರಣೆ ಮಾಡಬಹುದು ಎಂದು ನ್ಯಾಯಾಲಯಕ್ಕೆ ಮೊದಲನೇಯದಾಗಿ ಕಂಡುಬರಬೇಕಾಗುತ್ತದೆ. ಕೇವಲ ಮೇಲ್ನೋಟದ ದಾವೆ ತನ್ನ ಪರವಾಗಿ ಇದೆ ಎಂದ ಮಾತ್ರಕ್ಕೆ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆ ಪರಿಹಾರಕ್ಕೆ ಅರ್ಹನಾಗುವುದಿಲ್ಲ. ಅದನ್ನು ಹೊರತುಪಡಿಸಿ ವಾದಿಯು ತನ್ನ ಪರವಾಗಿ ಅನುಕೂಲತೆಯ ಒಲವು ಅಂದರೆ ಒಂದುವೇಳೆ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ ಪ್ರತಿವಾದಿಗೆ ಹೋಲಿಸಿದಲ್ಲಿ ತನಗೆ ಹೆಚ್ಚಿನ

ಅನಾನುಕೂಲತೆ ಉಂಟಾಗುತ್ತದೆ ಎಂದು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಬೇಕಾಗುತ್ತದೆ. ಅದೇರೀತಿಯಾಗಿ, ತನ್ನ ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆ ನೀಡದೇ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಗಿಂತ ಹೆಚ್ಚು ಹಾನಿ ಮತ್ತು ನಷ್ಟ ಉಂಟಾಗುತ್ತದೆ ಹಾಗೂ ಸದರಿ ನಷ್ಟವನ್ನು ಯಾವುದರಿಂದಲೂ ಭರಿಸಲು ಸಾಧ್ಯವಿಲ್ಲ ಎಂಬುದನ್ನು ಸಾಭೀತುಪಡಿಸಬೇಕಾಗುತ್ತದೆ. ಸದರಿ ಮೂರೂ ಅಂಶಗಳನ್ನು ವಾದಿಯು ಸಾಭೀತುಪಡಿಸಿದರೂ ಸಹ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶ ನೀಡುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಚಾರವಾಗಿರುತ್ತದೆ. ಒಂದುವೇಳೆ ವಾದಿಯು ವಾಸ್ತವ ಸಂಗತಿಗಳನ್ನು ಮಾರೆಮಾಚಿ ಶುದ್ಧ ಹಸ್ತದಿಂದ ನ್ಯಾಯಾಲಯಕ್ಕೆ ಬಂದಿಲ್ಲ ಎಂದು ಕಂಡುಬಂದರೆ, ಆಗಲೂ ಸಹ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಗೆ ಅರ್ಹನಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಅರ್ಜಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ವಾದಿಯು ತನ್ನ ದಾವೆಗೆ ಪೂರಕವಾಗಿ ಒಟ್ಟು 13 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ವಾದಿಯು ಹೇಳುವಂತೆ ದಾವಾ ಸ್ವತ್ತು ವಾದಿಗೆ ಭೂ ನ್ಯಾಯ ಮಂಡಳಿಯಿಂದ ದಿನಾಂಕ 18-08-1994 ರಂದು ಮಂಜೂರಾಗಿದೆ. ಈ ಕುರಿತು ವಾದಿಯು ಸಾಗುವಳಿ ಚೀಟಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಮಂಜೂರಾತಿಗೆ ಸಂಬಂಧಪಟ್ಟಂತೆ ಟಿ.ಟಿ. ಕಂದ ಹಾಗೂ ಸರ್ಕಾರಿ ಬಾಕಿ ಪಾವತಿಯ ರಶೀದಿಯನ್ನು ಸಹ ಹಾಜರುಪಡಿಸಿರುತ್ತಾರೆ. ಸದರಿ ವಾದಿಯು ತನ್ನ ಸಾಗುವಳಿ ಚೀಟಿಯೊಂದಿಗೆ ಫಲಾನುಭವಿಗಳ ಪಟ್ಟಿಯನ್ನು ಸಹ ಹಾಜರುಪಡಿಸಿರುತ್ತಾರೆ. ಅದೇರೀತಿಯಾಗಿ, ವಾದಿಯು ದಿನಾಂಕ 12-07-2022 ರಂದು ಸಾಗರದ ತಹಶೀಲ್ದಾರ್ ರವರಿಗೆ ಸಾಗುವಳಿ ಚೀಟಿ ಮತ್ತು ಭೂ ನ್ಯಾಯಾ ಮಂಡಳಿಯ ಆದೇಶದಂತೆ ತನಗೆ ಮಂಜೂರಾದ 1 ಎಕರೆ ಸ್ವತ್ತಿನ ಖಾತೆ ಮಾಡಿ ನೀಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಿನಾಂಕ 19-11-2016 ರಂದು ಅಂದಿನ ಕಂದಾಯ ಸಚಿವರು, ಸಾಗರದ ತಹಶೀಲ್ದಾರ್ ರವರಿಗೆ

ಸಾಗುವಳಿ ಚೀಟಿಯಂತೆ ವಾದಿಗೆ ಖಾತೆ ಮಾಡಿ ಪಹಣಿ ಮಾಡಲು ಸೂಚಿಸಿ ಟಿಪ್ಪಣಿನ್ನು ನೀಡಿರುತ್ತಾರೆ.

14. ಅದೇರೀತಿಯಾಗಿ ದಿನಾಂಕ 23-06-2022 ರ ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಸಾಗರ ಇವರ ಆದೇಶವನ್ನು ಹಾಜರುಪಡಿಸಿದ್ದು, ಸದರಿ ಆದೇಶದಂತೆ, ಪ್ರತಿವಾದಿಯು ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿ ಯು ದಿನಾಂಕ 23-06-2022 ರಂದು ತಿರಸ್ಕೃತಗೊಂಡಿರುತ್ತದೆ. ಸದರಿ ಆದೇಶದಂತೆ, ಪ್ರತಿವಾದಿಯು ಸರ್ಕಾರಿ ಜಮೀನನ್ನು 2 ನೇ ಪ್ರತಿವಾದಿಯು ಸಾಗುವಳಿ ಮಾಡಿಲ್ಲ ಎಂಬುದನ್ನು ಪುಷ್ಟೀಕರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂಬ ಕಾರಣಕ್ಕಾಗಿ, ವಾದಿಗೆ ಸಾಗುವಳಿ ಚೀಟಿಯನ್ನು ನೀಡಿರುವ ಆದೇಶವನ್ನು ಪುರಸ್ಕರಿಸಿ, ಸದರಿ ಪ್ರಸ್ತುತ 1 ನೇ ಪ್ರತಿವಾದಿಯು ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ. ಅದೇರೀತಿಯಾಗಿ, ತನ್ನ ಜಮೀನಿಗೆ ಪ್ರತಿವಾದಿಯು ತೊಂದರೆ ನೀಡುತ್ತಿದ್ದಾರೆ ಎಂದು ವಾದಿಯು ಹೇಳಿದ ದೂರನ್ನು ಸ್ವೀಕರಿಸಿದ ಬಗ್ಗೆ ಸಾಗರದ ಗ್ರಾಮಾಂತರ ಪೋಲಿಸ್ ಠಾಣೆಯ ಠಾಣಾಧಿಕಾರಿಗಳು ದಿನಾಂಕ 10-11-2025 ರಂದು ಹಿಂಬರಹವನ್ನು ನೀಡಿರುತ್ತಾರೆ. ಅದೇರೀತಿಯಾಗಿ, ವಾದಿಯು ಪೋಟೋಗಳು ಮತ್ತು ಪೆನ್ ಡ್ರೈವ್ ಅನ್ನು ಹಾಜರುಪಡಿಸಿರುತ್ತಾರೆ.

15. ಪ್ರತಿವಾದಿಯು ತನ್ನ ಪರವಾಗಿ ಸರ್ವೆ ನಂ.110 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ ಮತ್ತು ಪ್ರತಿವಾದಿಗೆ ಸದರಿ ಪಹಣಿ ಪತ್ರಿಕೆಯಂತೆ, ಶಿರೂರು ಗ್ರಾಮದ ಸರ್ವೆ ನಂ.110 ಇದು ಸರ್ಕಾರಿ ಜಮೀನಾಗಿದ್ದು, ಅದರಲ್ಲಿ 30 ಎಕರೆ 25 ಗುಂಟೆ ಜಮೀನು ಇರುತ್ತದೆ. ಈ ಪೈಕಿ ಸುಮಾರು 8 ಎಕರೆ ಜಮೀನನ್ನು ಈಗಾಗಲೇ ಹಲವು ಫಲಾನುಭವಿಗಳಿಗೆ ಮಂಜೂರು ಮಾಡಿದ್ದು, ಸರ್ಕಾರಿ ಮಾಲೀಕತ್ವದಲ್ಲಿ ಗೋಮಾಳ ಎಂದು 22 ಎಕರೆ 25 ಗುಂಟೆ ಜಮೀನು ಇರುವುದು ಕಂಡುಬರುತ್ತದೆ. ಅದೇರೀತಿಯಾಗಿ, ಪ್ರತಿವಾದಿಯ ತಂದೆ ಶಿವೀರ

ಕಣ್ಣಪ್ಪರವರಿಗೆ ಸದರಿ ಸರ್ವೆ ನಂ.110 ರಲ್ಲಿ 30 X 40 ವಿಸ್ತೀರ್ಣದ ವಾಸದ ನಿವೇಶನವು ದಿನಾಂಕ 19-11-1991 ರಂದು ಮಂಜೂರು ಮಾಡಿ, ಸಾಗರದ ತಹಶೀಲ್ದಾರ ರವರು ಹಕ್ಕು ಪತ್ರವನ್ನು ನೀಡಿರುತ್ತಾರೆ. ಅದೇರೀತಿಯಾಗಿ, ದಿನಾಂಕ 21-05-2018 ರ ಬಗರ್ ಹುಕುಂ ಪ್ರಕರಣ ಸಂಖ್ಯೆ 175/2016-17 ರ ಉಪವಿಭಾಗಾಧಿಕಾರಿಗಳು ಸಾಗರ ಇವರ ಆದೇಶವನ್ನು ಹಾಜರುಪಡಿಸಿರುತ್ತಾರೆ. ಸದರಿ ಆದೇಶವನ್ನು ಪರೀಶಿಲಿಸಲಾಗಿ, ಈ ಪ್ರತಿವಾದಿಗೆ ಸರ್ವೆ ನಂ.110 ರಲ್ಲಿ 20 ಗುಂಟೆ ಜಮೀನು ಮಂಜೂರಾಗಿದ್ದು, ತಾನು ಉಳಿದ ಜಾಗವನ್ನು ಮಂಜೂರು ಮಾಡಿ ಕೊಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದ ಅರ್ಜಿಯು ವಜಾಗೊಂಡಿದ್ದರ ಕುರಿತು ಸಲ್ಲಿಸಿದ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ, ಸದರಿ ಉಳಿದ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಪ್ರತಿವಾದಿಯು ಸಲ್ಲಿಸಿದ ಅರ್ಜಿಯನ್ನು ಪುನರ್ ಪರಿಶೀಲನೆ ಮಾಡುವಂತೆ ಸಾಗರದ ತಹಶೀಲ್ದಾರ್ ರವರಿಗೆ ಉಪವಿಭಾಗಾಧಿಕಾರಿಗಳು ಸೂಚಿಸಿರುತ್ತಾರೆ ಎಂಬುದು ಕಂಡು ಬರುತ್ತದೆ. ಅದೇರೀತಿಯಾಗಿ, ಈ ಪ್ರತಿವಾದಿಯು ಶಿರೂರು ಗ್ರಾಮದ ಗಣಕೀಕೃತ ನಕ್ಷೆಯನ್ನು ಹಾಜರುಪಡಿಸಿರುತ್ತಾರೆ.

16. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಮತ್ತು ಮಧ್ಯಂತರ ಅರ್ಜಿ ಮತ್ತು ವಾದಪತ್ರದ ಸಂಗತಿಗಳನ್ನು ಗಮನಿಸಿಲಾಗಿ, ಮೊದಲನೇಯದಾಗಿ ವಾದಿಯ ಹೆಸರಿಗೆ ಬಗರ್ ಹುಕುಂ ಸಮಿತಿಯಿಂದ ಸಾಗುವಳಿ ಚೀಟಿಯನ್ನು 1994 ರಲ್ಲಿ ನೀಡಿರುತ್ತಾರೆ. ಆದರೆ, ಸದರಿ ಸಾಗುವಳಿ ಚೀಟಿಯ ಅನುಸಾರ ಈವರೆಗೆ ಅಂದರೆ ಸುಮಾರು 30 ವರ್ಷ ಕಳೆದಿದ್ದರೂ ದಾವಾ ಸ್ವತ್ತಿನ ಖಾತೆಯು ವಾದಿಯ ಹೆಸರಿಗೆ ಬದಲಾವಣೆಯಾಗಿರುವುದಿಲ್ಲ. ಸದರಿ ಸಾಗುವಳಿ ಚೀಟಿಯನ್ನು ಹೊರತುಪಡಿಸಿ, ವಾದಿಯು ದಾವಾ ಸ್ವತ್ತಿನಲ್ಲಿನ ತನ್ನ ಸ್ವಾಧೀನವನ್ನು ತೋರಿಸಲು ಯಾವುದೇ ಕಂದಾಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದಕಾರಣ, ಸದರಿ ವಾದಿಯು ಸದರಿ ದಾವಾ ಸ್ವತ್ತಿನಲ್ಲಿ ದಾವೆ ಹೂಡುವ ದಿನದಂದು

ಸ್ವಾಧೀನಾನುಭವದಲ್ಲಿ ಇದ್ದಾರೆ ಎನ್ನುವುದು ಸಂಶಯದಿಂದ ಕೂಡಿರುತ್ತದೆ. ಕರ್ನಾಟಕ ಭೂ ಕಂದಾಯ ಅಧಿನಿಯಮದ ಕಲಂ 133 ರಂತೆ, ಕಂದಾಯ ದಾಖಲೆಗಳಲ್ಲಿನ ನಮೂದುಗಳ ಕುರಿತು ಪೂರ್ವಭಾವನೆಯನ್ನು ಮಾಡಬಹುದಾಗಿರುತ್ತದೆ. ಈ ದಾವೆಯಲ್ಲಿ ಸಾಗುವಳಿ ಚೀಟಿಯನ್ನು ವಾದಿಯ ಪರವಾಗಿ 1 ಎಕರೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನೀಡಿದ್ದರೂ ಸಹ, 30 ವರ್ಷಗಳಿಂದ ವಾದಿಗೆ ಹೆಸರಿಗೆ ಯಾವುದೇ ಕಂದಾಯ ದಾಖಲೆಗಳು ಬದಲಾವಣೆಯಾಗದೇ ಇರುವುದರಿಂದ ಮತ್ತು ಸದರಿ ಸ್ವತ್ತಿನಲ್ಲಿನ ವಾದಿಯ ಸ್ವಾಧೀನವನ್ನು ತೋರಿಸುವ ಯಾವುದೇ ದಾಖಲೆಗಳನ್ನು ವಾದಿಯು ಹಾಜರುಪಡಿಸದೇ ಇರುವುದರಿಂದ, ಸದರಿ ವಾದಿಯ ವಿರುದ್ಧ ಪ್ರತಿಕೂಲ ನಿಲುವನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

17. ಸದರಿ ವಾದಿಯು ಹಾಜರುಪಡಿಸಿರುವ ಟಿ.ಟಿ ಹಾಗೂ ನೆಲ ಕಿಮ್ಮತ್ತನ್ನು ಪಾವತಿ ಮಾಡಿದ ರಶೀಧಿಯನ್ನು ಗಮನಿಸಿಲಾಗಿ, ಸದರಿ ರಶೀದಿಯು ದಾವಾ ಸ್ವತ್ತಿನ ಮಾಂಜೂರಾತಿಗೆ ಸಂಬಂಧಪಟ್ಟ ಖರ್ಚುಗಳನ್ನು ಪಾವತಿಸಿದ ಬಗ್ಗೆ ರಶೀದಿಯಾಗಿರುತ್ತದೆ. ಒಂದು ವೇಳೆ ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದರೆ, ಆ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯು ಕಂದಾಯ ಇಲಾಖೆಗೆ ಕಂದಾಯವನ್ನು ಪಾವತಿ ಮಾಡುತ್ತಿದ್ದರು, ಆದರೆ, ಯಾವುದೇ ಕಂದಾಯ ರಶೀದಿಗಳನ್ನು ವಾದಿಯು ತನ್ನ ಸ್ವಾಧೀನಕ್ಕೆ ಪೂರಕವಾಗಿ ಹಾಜರುಪಡಿಸಿರುವುದಿಲ್ಲ.

18. ಪ್ರತಿವಾದಿಯು ಹಾಜರುಪಡಿಸಿರುವ ಗಣಕೀಕೃತ ನಕ್ಷೆ ಹಾಗೂ ವಾದಪತ್ರದ ಶೆಡ್ಯೂಲ್ ಅನ್ನು ಗಮನಿಸಿಲಾಗಿ, ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ.91 ಇರುತ್ತದೆ. ಅದೇರೀತಿಯಾಗಿ, ಪಶ್ಚಿಮಕ್ಕೆ ದಾವಾ ಸ್ವತ್ತಿನ ಉಳಿದ ಭಾಗ ಎಂಬುದಾಗಿ ಕಾಣಿಸಿರುತ್ತಾರೆ. ಸದರಿ ಶೆಡ್ಯೂಲ್ ನಲ್ಲಿ ಸರ್ವೆ ನಂ110 ರಲ್ಲಿ 1 ಎಕರೆ ಕ್ಷೇತ್ರದಲ್ಲಿ ವಾದಿ ತೆಂಗು ಅಡಿಕೆ ಮತ್ತಿ ಹಾಗೂ ಇತರೆ ಬೆಳೆಗಳನ್ನು ಬೆಳೆದಿರುವುದಾಗಿ ಹೇಳಿದ್ದಾರೆ. ಹಾಗಿದ್ದಲ್ಲಿ, ದಾವಾ ಸ್ವತ್ತಿನ ಪಶ್ಚಿಮಕ್ಕೆ ಸರ್ವೆ ನಂ.110 ರ ಉಳಿದ

ಭಾಗ ಇರಬೇಕಾಗಿತ್ತು, ಆದರೆ ಸದರಿ ಪಶ್ಚಿಮ ದಿಕ್ಕಿನಲ್ಲಿ ದಾವಾ ಸ್ವತ್ತಿನ ಉಳಿದ ಜಾಗ ವೆಂದು ವಾದಿಯು ತನ್ನ ದಾವೆಯ ಶೆಡ್ಯೂಲ್ ನಲ್ಲಿ ಕಾಣಿಸಿರುವುದರಿಂದ, ಸದರಿ ವಾದಿಯ ಸ್ವತ್ತಿನ 1 ಎಕರೆ ಜಾಗದ ಗಡಿಯು ಎಲ್ಲಿಯವರೆಗೆ ಇದೆ ಎಂಬುದು ವಾದಿಗೆ ಸ್ವತಃ ತಿಳಿದಿರುವುದಿಲ್ಲ. ಅದೂಅಲ್ಲದೇ ವಾದಿಯು ಹಾಜರುಪಡಿಸಿರುವ ಸಾಗುವಳಿ ಚೀಟಿಯಲ್ಲಿ ದಾವಾ ಶೆಡ್ಯೂಲ್ ನಲ್ಲಿ ಕಾಣಿಸಿದ ಚೆಕ್ಕುಬಂದಿ ನಮೂದುಗಳು ಆಗಿರುವುದಿಲ್ಲ. ಸದರಿ ವಾದಿಯ ದಾವಾ ಪತ್ರದ ಶೆಡ್ಯೂಲ್ ಯಾವುದೇ ಪೂರಕ ದಾಖಲೆಗಳೊಂದಿಗೆ ತಾಳೆ ಯಾಗದೇ ಇರುವುದರಿಂದ ಸದರಿ ಸ್ವತ್ತಿನ ಗಡಿ ಗುರುತುಗಳನ್ನು ಗುರ್ತಿಸುವುದು ಅಸಾಧ್ಯವಾಗಿರುತ್ತದೆ. ದಾವಾ ಸ್ವತ್ತು ವಾದಿಯ ಸ್ವಾಧೀನಾನುಭವದಲ್ಲಿ ಇದೆ ಎಂದು ಹೇಳಲು ಆಗುವುದಿಲ್ಲ.

19. ಸದರಿ ಮಧ್ಯಂತರ ಅರ್ಜಿಯನ್ನು ನಿರ್ಧರಿಸುವಾಗ ನ್ಯಾಯಾಲಯವು ಪ್ರಕರಣದ ಗುಣಾವಗುಣಗಳ ಮೇಲೆ ಅಂತಿಮ ಅಭಿಪ್ರಾಯನ್ನು ವ್ಯಕ್ತಪಡಿಸುವುದು ಸೂಕ್ತವಲ್ಲ. ಸದರಿ ದಾವಾ ಸ್ವತ್ತಿನ ಗಡಿ ಗುರುತಗುಳ ಬಗ್ಗೆ ವಾದಿಗೆ ಸ್ವತಃ ಖಚಿತತೆ ಇಲ್ಲದಿರುವಾಗ, ವಾದಿಯು ದಾವಾ ಸ್ವತ್ತಿನ ಯಾವ ಭಾಗದಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂಬುದಾಗಿ ನಿರ್ಣಯಿಸಲು ಅಸಾಧ್ಯವಾಗಿರುತ್ತದೆ. ವಾದಿಯು ಹಾಜರುಪಡಿಸಿರುವ ಜಮೀನಿನ ಮಂಜೂರಾತಿ ಅರ್ಜಿಯ ದೃಢಿಕೃತ ಪ್ರತಿಯನ್ನು ಗಮನಿಸಲಾಗಿ, ಅದರಲ್ಲಿ ಸುಮಾರು 45 ರಿಂದ 50 ಜನ ಫಲಾನುಭವಿಗಳಿಗೆ ಸರ್ವೆ ನಂ.110 ರಲ್ಲಿ ಸ್ವತ್ತನ್ನು ಮಂಜೂರು ಮಾಡಿರುವುದು ಕಂಡುಬರುತ್ತದೆ. ಸದರಿ ಫಲಾನುಭವಿಗಳಿಗೆ ಮಂಜೂರು ಮಾಡಿರುವ ಕ್ಷೇತ್ರವನ್ನು ಗಮನಿಸಿದಾಗ, ಸದರಿ ಕ್ಷೇತ್ರವು ಸುಮಾರು 40 ಎಕರೆಗೂ ಮೇಲ್ಪಟ್ಟು ಇರುತ್ತದೆ. ಆದರೆ, ಪ್ರತಿವಾದಿಯು ಹಾಜರುಪಡಿಸಿದ ಪಹಣಿ ಪತ್ರಿಕೆಯನ್ನು ಗಮನಿಸಿದಾಗ, ಸರ್ವೆ ನಂ.110 ರಲ್ಲಿ ಕೇವಲ 30 ಎಕರೆ 25 ಗುಂಟೆ ಜಮೀನು ಇದ್ದು, ಸದರಿ ಪೈಕಿ ಸರ್ಕಾರಿ ಗೋಮಾಳ ಎಂದು 20 ಎಕರೆ 25 ಗುಂಟೆ ಮಾತ್ರ ಇರುತ್ತದೆ.

ಹೀಗಿರುವಾಗ, ಸದರಿ ಸರ್ವೆ ನಂ.110 ರಲ್ಲಿ ಇರುವ ಜಾಗವನ್ನು ಎಲ್ಲಾ ಪಲಾನುಭವಿಗಳಿಗೆ ಹಂಚಿಕೆ ಮಾಡುವುದು ಅಸಾಧ್ಯವಾಗಿರುತ್ತದೆ. ಆದಕಾರಣ, ಸದರಿ ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

20. ಸದರಿ ದಾವಾ ಸ್ವತ್ತು ವಾದಿಗೆ ಮಂಜೂರಾಗಿದ್ದು, ಸದರಿ 1 ಎಕರೆ ಕ್ಷೇತ್ರದಲ್ಲಿ ವಾದಿಯು ದಾವೆ ಹೂಡುವ ದಿನದಂದು ಸ್ವಾಧೀನಾನುಭವದಲ್ಲಿ ಇದ್ದಾನೆ ಎಂದು ಭಾವಿಸಿದರೂ ಸಹ, ಒಂದು ವೇಳೆ ಮಧ್ಯಂತರ ಅರ್ಜಿ ಸಂಖ್ಯೆ -1 ನ್ನು ಪುರಸ್ಕರಿಸಿದರೆ, ಸದರಿ ದಾವಾ ಸ್ವತ್ತಿನ ಗಡಿಗುರುತುಗಳು ನಿಖರವಾಗಿಲ್ಲದ ಕಾರಣ ಮತ್ತು ಗಡಿಗುರುತುಗಳಿಗೆ ಪೂರಕವಾಗಿ ಯಾವುದೇ ದಾಖಲೆಗಳು ಲಭ್ಯವಿಲ್ಲದ ಕಾರಣ, ಸದರಿ ಆದೇಶವನ್ನು ಜಾರಿಗೊಳಿಸುವುದು ಅಸಾಧ್ಯವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ, ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ದಾವೆ ಹೂಡುವ ದಿನದಂದು ಇದ್ದೇನೆ ಎಂಬುದನ್ನು ಮೇಲ್ನೋಟಕ್ಕೆ ಸಾಭೀತುಪಡಿಸಲು ವಿಫಲನಾಗಿರುವುದರಿಂದ ವಾದಿಯ ಪರವಾಗಿ ಮೇಲ್ನೋಟದ ದಾವೆ ಇಲ್ಲ ಎಂದು ಕಂಡು ಬರುತ್ತದೆ. ಆದ್ದರಿಂದ, ವಾದಿಯು ತನ್ನ ಪರವಾಗಿ ಮೇಲ್ನೋಟದ ದಾವೆ ಎಂದು ಸಾಭೀತುಪಡಿಸಲು ಈ ಹಂತದಲ್ಲಿ ವಿಫಲನಾಗಿರುವಾಗ, ಸದರಿ ವಾದಿಯ ಪರವಾಗಿ ಅನುಕೂಲತೆ ಸಹ ಇರುವುದಿಲ್ಲ. ಆದ್ದರಿಂದ, ಸದರಿ ವಾದಿಯು ಮಧ್ಯಂತರ ಅರ್ಜಿಯಲ್ಲಿ ಕೋರಿದಂತೆ ಆದೇಶವನ್ನು ಈ ಹಂತದಲ್ಲಿ ನೀಡಿದರೆ, ಸದರಿ ಆದೇಶದ ದುರ್ಬಳಕೆ ಆಗುವ ಸಾಧ್ಯತೆ ಇರುತ್ತದೆ. ಆದಕಾರಣ, ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸುವುದರಿಂದ ವಾದಿಗಿಂತ ಹೆಚ್ಚು ಹಾನಿ ಮತ್ತು ನಷ್ಟ ಪ್ರತಿವಾದಿಗೆ ಉಂಟಾಗುತ್ತದೆ. ಆದಕಾರಣ, ಮೇಲಿನ ಅಂಶ-1 ರಿಂದ 3 **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

21. **ಅಂಶ–4** : ಅಂಶ 1 ರಿಂದ 3 ರಲ್ಲಿನ ಮೇಲಿನ ಚರ್ಚೆಯಿಂದ ಬಂದಂತಹ ಉತ್ತರದಿಂದ ಈ ಕೆಳಕಂಡಂತೆ,

**ಆದೇಶ**

ವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2, ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ–1 ನ್ನು ತಿರಸ್ಕರಿಸಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶವಿಲ್ಲ.

*(ಈ ಆದೇಶವನ್ನು ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ನೀಡಿದ್ದು, ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿದ, ನಂತರ ಈ ದಿನ ಅಂದರೆ **19** ನೇ ಡಿಸೆಂಬರ್ 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ)*

**(ಮಾದೇಶ ಎಂ.ವಿ.,)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.